# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:0.00 ಕಿ.ಮೀ. ರಿಂದ 70.00 ಕಿ.ಮೀ. ವರೆಗೆ ಹಾಗೂ ವೈ-ನಾಲೆಯ ಸರಪಳಿ: 15.727 ಕಿ.ಮೀ. ನಿಂದ 21.175 ಕಿ.ಮೀ. ವರೆಗೆ ರೀ-ಮಾಡಲಿಂಗ್ ಮಾಡುವ ರೂ.475.00 ಕೋಟಿಗಳ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

***ಓದಲಾಗಿದೆ :-***

1) ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-5/ತುರುವೇಕೆರೆ ವಿಭಾಗ/03/2018-19/3491, ದಿನಾಂಕ:16-01-2019.

2) ಸರ್ಕಾರದ ಆದೇಶ ಸಂಖ್ಯೆ:ಜಸಂಇ 4 ಎನ್ ಹೆಚ್ ಪಿ 2019, ದಿನಾಂಕ:01.07.2019.

3) ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-5/ತುರುವೇಕೆರೆ ವಿಭಾಗ/03/2019-20, ದಿನಾಂಕ:14-11-2019.

***ಪ್ರಸ್ತಾವನೆ :-***

1. ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:0.00 ಕಿ.ಮೀ. ರಿಂದ 70.00 ಕಿ.ಮೀ. ವರೆಗೆ ಹಾಗೂ ವೈ-ನಾಲೆಯ ಸರಪಳಿ: 15.727 ಕಿ.ಮೀ. ನಿಂದ 21.175 ಕಿ.ಮೀ. ವರೆಗೆ ರೀ-ಮಾಡಲಿಂಗ್ ಮಾಡುವ ರೂ.475.00 ಕೋಟಿ ಮೊತ್ತದ ವಿವರವಾದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ.

2. ಮೇಲೆ ಓದಲಾದ (2)ರಲ್ಲಿ ಸರ್ಕಾರಿ ಆದೇಶದಲ್ಲಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:0.00 ಕಿ.ಮೀ. ರಿಂದ 70.00 ಕಿ.ಮೀ. ವರೆಗೆ ಹಾಗೂ ವೈ-ನಾಲೆಯ ಸರಪಳಿ: 15.727 ಕಿ.ಮೀ. ನಿಂದ 21.175 ಕಿ.ಮೀ. ವರೆಗೆ ರೀ-ಮಾಡಲಿಂಗ್ ಮಾಡುವ ರೂ.475.00 ಕೋಟಿಗಳ ವಿವರವಾದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಪ್ರಸ್ತಾಪಿತ ಯೋಜನೆಯನ್ನು ಎರಡು ಹಂತಗಳಲ್ಲಿ, ಅಂದರೆ ಮೊದಲನೇ ಹಂತ ರೂ.250.00 ಕೋಟಿ ಮತ್ತು ಎರಡನೇ ಹಂತ ರೂ.225.00 ಕೋಟಿ, ಒಟ್ಟಾರೆ ರೂ.475.00

ಕೋಟಿ ಮೊತ್ತದಲ್ಲಿ ಕೈಗೊಳ್ಳತಕ್ಕದ್ದು, ಹಾಗೂ 2019-20ನೇ ಸಾಲಿನಲ್ಲಿ ಮೊದಲನೇ ಹಂತಕ್ಕೆ ಮಾತ್ರ ಟೆಂಡರ್ ಕರೆಯಲು ಅನುಮೋದನೆ ನೀಡಿ ಆದೇಶ ಹೊರಡಿಸಲಾಗಿತ್ತು.

3. ಆದರೆ ಮೇಲೆ ಓದಲಾದ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:0.00 ಕಿ.ಮೀ. ರಿಂದ 70.00 ಕಿ.ಮೀ. ವರೆಗೆ ಹಾಗೂ ವೈ-ನಾಲೆಯ ಸರಪಳಿ: 15.727 ಕಿ.ಮೀ. ನಿಂದ 21.175 ಕಿ.ಮೀ. ವರೆಗೆ ರೀ-ಮಾಡಲಿಂಗ್ ಮಾಡುವ ಪ್ರಸ್ತಾವನೆಯು ಸಮಗ್ರ ಯೋಜನೆಯಾಗಿದ್ದು, 70 ಕಿ.ಮೀ. ಉದ್ದದಲ್ಲಿ ಆಧುನೀಕರಣ ಕಾಮಗಾರಿಯನ್ನು ಸಮಗ್ರ ಕ್ರಮದಲ್ಲಿ ಕೈಗೆತ್ತಿಕೊಳ್ಳಬೇಕಾದ ಅವಶ್ಯಕತೆಯಿದ್ದು, ಕಾಮಗಾರಿಯ ಅನುಷ್ಠಾನ ಸಮಯದಲ್ಲಿ ಮಿತಿಗೊಳಿಸಿಕೊಂಡು ಉಳಿಕೆ ಕಾಮಗಾರಿ ಮೊತ್ತವಾದ ರೂ.225.00 ಕೋಟಿಗಳನ್ನು 2020-21ನೇ ಸಾಲಿನ ವಲಯದ ಕ್ರಿಯಾ ಯೋಜನೆಯಲ್ಲಿ ಮುಂದುವರೆದ ಕಾಮಗಾರಿಯಾಗಿ ಸೇರ್ಪಡೆ ಮಾಡಿಕೊಂಡು ವೆಚ್ಚ ಭರಿಸಲು ಅನುವಾಗುವಂತೆ ಪರಿಷ್ಕೃತ ಆದೇಶವನ್ನು ನೀಡುವಂತೆ ಕೋರಲಾಗಿದೆ.

4. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ : ಜಸಂಇ 4 ಎನ್‌ಹೆಚ್‌ಪಿ 2019, ಬೆಂಗಳೂರು, ದಿನಾಂಕ :07-02-2020

ಸರ್ಕಾರದ ಆದೇಶ ಸಂಖ್ಯೆ:ಜಸಂಇ 4 ಎನ್‌ಹೆಚ್‌ಪಿ 2019, ದಿನಾಂಕ:01-07-2019 ವನ್ನು ಹಿಂಪಡೆದು, ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:0.00 ಕಿ.ಮೀ. ರಿಂದ 70.00 ಕಿ.ಮೀ. ವರೆಗೆ ಹಾಗೂ ವೈ-ನಾಲೆಯ ಸರಪಳಿ: 15.727 ಕಿ.ಮೀ. ನಿಂದ 21.175 ಕಿ.ಮೀ. ವರೆಗೆ ರೀ-ಮಾಡಲಿಂಗ್ ಮಾಡುವ ರೂ.475.00 ಕೋಟಿಗಳ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಯ ಮೊತ್ತವಾದ

ರೂ.475.00 ಕೋಟಿ(ರೂಪಾಯಿ ನಾಲ್ಕು ನೂರಾ ಎಪ್ಪತ್ತೈದು ಕೋಟಿಗಳು ಮಾತ್ರ)ಗಳಿಗೆ ಟೆಂಡರ್ ಅಹ್ವಾನಿಸಿ, ಕಾಮಗಾರಿಯ ರೂ.250.00(ರೂಪಾಯಿ ಎರಡು ನೂರ ಐವತ್ತು ಕೋಟಿಗಳು ಮಾತ್ರ) ಕೋಟಿ ಮೊತ್ತಕ್ಕೆ ಮಾತ್ರ 2019-20ನೇ ಸಾಲಿನಲ್ಲಿ ಖರ್ಚು ಭರಿಸುವುದಕ್ಕೆ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:14, ದಿನಾಂಕ:03.01.2020ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಹರಿ ಎಸ್.ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ. (ತಾಂತ್ರಿಕ-2)

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-35/2020, ದಿನಾಂಕ:17-01-2020).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.